## ಸೆಲೆಬ್ರಿಟಿ

■ ಹನಿ

## ಹಿರಿಯಜ್ಜಿಗೆ ನೂರು



'ಭಾರತೀಯ ರಂಗಭೂಮಿಯ ಹಿರಿಯಜ್ಜಿ' ಜೊಹ್ರಾ ಸೆಹ್‌ಗಲ್‌ಗೆ ಶತಾಯುಷ್ಯದ ಸಂಭ್ರಮ. (ಬರ್ತ್‌ಡೇ 27–4–1912) ಈಗಲೂ ಕೈಕಾಲು ಗಟ್ಟಿಯಾಗಿರುವ, ತನ್ನನ್ನು ತಾನೇ ಗೇಲಿ ಮಾಡಿಕೊಂಡು ನಗುವ ಸಾಮರ್ಥ್ಯ ಉಳ್ಳ ಜೊಹ್ರಾ ಹಳೆಯ ಮತ್ತು ಹೊಸ ತಲೆಮಾರಿನ ಕೊಂಡಿಯಾಗಿ ಉಳಿದುಕೊಂಡಿದ್ದಾರೆ. ಆ ಕೊಂಡಿ ಇಂಗ್ಲಿಷ್–ಉರ್ದು–ಹಿಂದಿಯದ್ದೂ ಹೌದು; ರಂಗಭೂಮಿ– ಸಿನಿಮಾ– ಕಿರುತೆರೆಯದ್ದೂ ಹೌದು! ಪದ್ಮಶ್ರೀ (1998), ಕಾಳಿದಾಸ ಸಮ್ಮಾನ್ (2001), ಸಂಗೀತ–ನಾಟಕ ಅಕಾಡೆಮಿ ಫೆಲೋಶಿಪ್ (2004), ಪದ್ಮ ವಿಭೂಷಣ (2010)– ಹೀಗೆ ಜೀವಮಾನದ ಸಾಧನೆಗಾಗಿ ಉದ್ದಕ್ಕೂ ಗೌರವಗಳನ್ನು ಪಡೆದುಕೊಂಡೇ ಬಂದ ಜೊಹ್ರಾ ಈ ಗೌರವಗಳಿಗೆ ತಕ್ಕಂತೆ ನಡೆನುಡಿಯಲ್ಲೂ ಅಪ್ಪಟ ಚಿನ್ನವೇ.

ಉತ್ತರ ಪ್ರದೇಶದ ಶ್ರೀಮಂತ ಪಠಾಣ್ ಕುಟುಂಬದಲ್ಲಿ ಹುಟ್ಟಿದ ಜೊಹ್ರಾ ಮುಮ್ತಾಜ್, ಒಂದು ವರ್ಷ ವಯಸ್ಸಿನಲ್ಲೇ ಗ್ಲುಕೋಮಾದಿಂದಾಗಿ ಎಡಗಣ್ಣಿನ ದೃಷ್ಟಿ ಕಳೆದುಕೊಂಡವಳು. ಆ ಕಾಲದಲ್ಲೇ ಈಕೆಯ ಕಣ್ಣಿನ ಚಿಕಿತ್ಸೆಗೆ ಕುಟುಂಬ 3 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿತ್ತು. ಎಳವೆಯಲ್ಲೇ ತಾಯಿಯನ್ನು ಕಳೆದುಕೊಂಡ ಜೊಹ್ರಾ, ತಾಯಿಯ ಇಚ್ಛೆಯಂತೆಯೇ ಅಕ್ಕನ ಜತೆಗೆ ಲಾಹೋರ್‌ನ ಕ್ವೀನ್ ಮೇರಿ ಕಾಲೇಜು ಸೇರಿದಳು. ಪದವಿಯ ಬಳಿಕ ಲಂಡನ್‌ನಲ್ಲಿ ನಟನೆಯ ಕಲಿಕೆ, ಜರ್ಮನಿಯಲ್ಲಿ ನೃತ್ಯ ಕಲಿಕೆ. ಯೂರೋಪ್ ಪ್ರವಾಸದಲ್ಲಿದ್ದ ನೃತ್ಯಪಟು ಉದಯಶಂಕರ್ ಅವರ ಪ್ರದರ್ಶನವೊಂದನ್ನು ನೋಡಿದ್ದೇ ನೆಪ, ಮುಂದಿನ ಜಪಾನ್ ಪ್ರವಾಸದಲ್ಲಿ ಉದಯಶಂಕರ್ ತಂಡಕ್ಕೆ ಸೇರ್ಪಡೆ. 8 ವರ್ಷ ಆ ತಂಡದ ಒಡನಾಟ.

ಒಂದರ್ಥದಲ್ಲಿ ಜೊಹ್ರಾ ವಿಶ್ವಪ್ರಜೆ. ಭಾರತ, ಪಾಕಿಸ್ತಾನ, ಲಂಡನ್, ಜರ್ಮನಿ– ಹೀಗೆ ಎಲ್ಲೆಡೆ ಇವರ ಓಡಾಟ. ತನಗಿಂತ ಕಿರಿಯ ನೃತ್ಯಪಟು ಕಾಮೇಶ್ವರ ಸೆಹಗಲ್ ಜತೆ ಸ್ನೇಹ ಪ್ರೀತಿಗೆ ತಿರುಗಿ ಕೊನೆಗೆ ಮದುವೆಯೂ ಆಯಿತು. ಮೊದಲು ಪ್ರತಿಭಟಿಸಿದ ಕುಟುಂಬ ವರ್ಷಗಳ ಬಳಿಕ ರಾಜಿಯಾಯಿತು. ಬಿಬಿಸಿ ಟೀವಿ ಸೀರಿಯಲ್‌ಗಳಲ್ಲಿ ನಟಿಸಿದ್ದು ಖ್ಯಾತಿಯನ್ನು ಹೆಚ್ಚಿಸಿತು. ಮುಂಬೈಗೆ ವಾಪಸಾಗಿ ಪೃಥ್ವಿ ಥಿಯೇಟರ್ ಸೇರಿ ದೇಶಾದ್ಯಂತ ತಿರುಗಾಡಿ ನಾಟಕಗಳನ್ನು ಆಡಿದ್ದು; ಜತೆಗೇ ಟೀವಿ ಸೀರಿಯಲ್ ಮತ್ತು ಸಿನಿಮಾಗಳಲ್ಲಿ ಪಾತ್ರ ವಹಿಸಿದ್ದು; ಆ ಬಳಿಕ ಇಪ್ಟಾ ಸೇರಿ ಜನಮುಖಿ ರಂಗ ಚಳುವಳಿಯ ಭಾಗವಾದದ್ದು– ಹೀಗೆ ಜೊಹ್ರಾರದ್ದು ಬಿಡುವಿಲ್ಲದ ಜೀವನ. ಕೆ.ಎ.ಅಬ್ಬಾಸ್‌ರ 'ಧರ್ತಿ ಕೆ ಲಾಲ್' ಈಕೆಯ ಮೊದಲ ಸಿನಿಮಾ. ಆ ಬಳಿಕ ಚೇತನ್ ಆನಂದ್‌ರ 'ನೀಚಾ ನಗರ್' ನಲ್ಲಿ ನೀಡಿದ ಅಭಿನಯ ಪ್ರಶಸ್ತಿಯನ್ನೂ ತಂದುಕೊಟ್ಟಿತು. ಅಲ್ಕಾಜಿಯವರ 'ದಿನ್ ಕೆ ಅಂಧೇರೆ' ನಾಟಕದಲ್ಲಿ ವಹಿಸಿದ ಪಾತ್ರವಂತೂ ದೇಶಾದ್ಯಂತ ಮನೆಮಾತಾಯಿತು.

ಸಿನಿಮಾದಲ್ಲಿ ಕೊರಿಯೊಗ್ರಾಫರ್ ಕೂಡಾ ಆಗಿದ್ದ ಜೊಹ್ರಾ, ಗುರುದತ್ ಅವರ 'ಬಾಜಿ' ಮತ್ತು ರಾಜ್‌ಕಪೂರ್ ಅವರ 'ಆವಾರಾ'ದ ನೃತ್ಯ ನಿರ್ದೇಶನದಿಂದಲೂ ಹೆಸರುವಾಸಿಯಾದರು. ಗಂಡ ಈಗಿಲ್ಲ. ಮಗ ಪವನ್ ಹಿಂದಿಯ ಸುಪ್ರಸಿದ್ಧ ಕಥೆಗಾರ ಮುನ್ಷಿ ಪ್ರೇಮಚಂದ್‌ರ ಮೊಮ್ಮಗಳನ್ನು ಮದುವೆಯಾದ. ಮಗಳು ಕಿರಣ್ ಜನಪ್ರಿಯ ಒಡಿಸ್ಸಿ ನೃತ್ಯಗಾತಿ. 'ಅಮ್ಮಾ ಆ್ಯಂಡ್ ಫ್ಯಾಮಿಲಿ'ಯ ಪ್ರೀತಿಯ ಈ ಅಜ್ಜಿ ನೂರು ದಾಟಿ ಈಗಲೂ ಆರೋಗ್ಯವಂತ ಮನಸ್ಸು–ದೇಹವನ್ನು ಉಳಿಸಿಕೊಂಡಿರುವುದು ಅನುಕರಣೀಯ ಪವಾಡ.

## ಮಮತಾಗೆ ಏನಾಗಿದೆ?

ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ವಿಜಯ ಗಳಿಸಿ ಕಮ್ಯುನಿಸ್ಟರ ಕೋಟೆಯನ್ನು ಕೆಡವಿದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ದೀದಿಯ ಆಡಳಿತ ಅದ್ಯಾಕೋ ಹಳಿ ತಪ್ಪುತ್ತಿದೆ. ಭಿನ್ನ ಅಭಿಪ್ರಾಯಗಳನ್ನು ಸಹಿಸಿಕೊಳ್ಳುವುದೇ ಅಸಾಧ್ಯ ಎನ್ನುವಂತೆ ವರ್ತಿಸುತ್ತಿರುವ ಮಮತಾ ದೀದಿ, ಪ್ರಜಾಪ್ರಭುತ್ವದ ಮೂಲಬೇರುಗಳಿಗೇ ಕತ್ತರಿ ಆಡಿಸುತ್ತಿರುವುದು ತಮಾಷೆಯಾಗಿ ಕಾಣುತ್ತಿದೆ.



ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಘಟನೆಗಳು ಹಾಗೂ ಅವುಗಳಿಗೆ ಮಮತಾ ಬ್ಯಾನರ್ಜಿ ನೀಡುತ್ತಿರುವ ಪ್ರತಿಕ್ರಿಯೆಗಳು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ಎಲ್ಲರನ್ನೂ ಚಿಂತೆಗೀಡು ಮಾಡಿವೆ.

ತಮ್ಮದೇ ಪಕ್ಷದ ರೈಲ್ವೆ ಸಚಿವ ದಿನೇಶ್ ತ್ರಿವೇದಿ ಅವರ ರಾಜೀನಾಮೆ ಪಡೆಯುವಲ್ಲಿ ಮಮತಾ ದೀದಿಯ ನಡೆ, ಮೈತ್ರಿ ರಾಜಕೀಯದ ತತ್ವಗಳಿಗೆ ತಿಲಾಂಜಲಿ ಇಟ್ಟಿದೆ. ಈ ವಿಷಯಕ್ಕೆ ಸಂಬಂಧಿಸಿ ಜಾಧವಪುರ ವಿಶ್ವವಿದ್ಯಾಲಯದ ಪ್ರೊಫೆಸರ್ ಅಂಬಿಕೇಶ್ ಮಹಾಪಾತ್ರ ಬಿಡಿಸಿದ ವ್ಯಂಗ್ಯಚಿತ್ರಕ್ಕೆ ದೀದಿ ನೀಡಿದ ಪ್ರತಿಕ್ರಿಯೆ ಅತಿರೇಕದ್ದು. ಮಹಾಪಾತ್ರ ಅವರ ಮೇಲೆ ತೃಣಮೂಲ ಕಾರ್ಯಕರ್ತರು ಹಲ್ಲೆ ನಡೆಸಿದ್ದೇ ಅಲ್ಲದೆ, ಮಹಾಪಾತ್ರ ಅವರು ಪೊಲೀಸ್ ಲಾಕಪ್‌ನಲ್ಲಿ ಒಂದು ರಾತ್ರಿ ಕಳೆಯಬೇಕಾಯಿತು! ಒಂದೆಡೆ ರಾಜ್ಯದ ಗ್ರಂಥಾಲಯಗಳಿಗೆ ಎಡ ವಿಚಾರಧಾರೆಯ ಪತ್ರಿಕೆಗಳನ್ನು ಖರೀದಿಸದಂತೆ ನಿಷೇಧ ಹೇರಿದ ಮಮತಾ ದೀದಿ, ಇನ್ನೊಂದೆಡೆ ಸರಕಾರದ್ದೇ ಸ್ವಂತ ಪತ್ರಿಕೆ ಮತ್ತು ಟೀವಿ ಚಾನೆಲ್‌ಅನ್ನು ಆರಂಭಿಸುವ ಘೋಷಣೆ ಮಾಡಿದ್ದಾರೆ. ಮಹಿಳೆಯೊಬ್ಬರ ಮೇಲೆ ಅತ್ಯಾಚಾರವಾದದ್ದನ್ನು ಮಾಧ್ಯಮಗಳು ಪ್ರಕಟಿಸಿದ್ದೇ ಅವರಿಗೆ ಅಪರಾಧವಾಗಿ ಕಂಡಿದೆ. ಈ ಹಿಂದೆ ಮಹಿಳೆಯರ ಮೇಲೆ ದೌರ್ಜನ್ಯ ನಡೆದಲ್ಲಿಗೆ ಮಿಂಚಿನಂತೆ ಧಾವಿಸುತ್ತಿದ್ದ ಮಮತಾ ಬ್ಯಾನರ್ಜಿ, ಈಗ ಈ ಅತ್ಯಾಚಾರ ನಡೆದದ್ದೇ ಸುಳ್ಳು ಎಂದು ವಾದಿಸುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಯಾವುದೇ ಪಕ್ಷಕ್ಕೆ ಅತ್ಯಧಿಕ ಬಹುಮತ ಕೊಡುವುದೇ ಅಪರಾಧ ಎನ್ನುವ ತೀರ್ಮಾನಕ್ಕೆ ಬಂಗಾಳದ ಜನರು ಬರುವ ಮುನ್ನ ದೀದಿ ಎಚ್ಚೆತ್ತುಕೊಂಡರೆ ಅವರಿಗೇ ಒಳ್ಳೆಯದು. ■

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65